ಹುಡುಗಿಯನ್ನು ಜೊತೆಯಾಗಿ ಕ್ಯಾಂಪಿನಲ್ಲಿ ನೋಡಿದಾಗ ನನಗೆ ನೆನಪಾಗುವುದು ಅಂಗಳ ತುಂಬ ಜಮಖಾನದಂತೆ ಹೂವ ಹಾಸಿ ಉಳಿದದ್ದನ್ನು ಮೈ ತುಂಬ ಮುಡಿದು ನಿಲ್ಲುವ ನಮ್ಮನೆಯಂಗಳದ ಪಾರಿಜಾತ ವೃಕ್ಷ ಮತ್ತು ಅದರ ಸುತ್ತಲಿನ ಪಾವಿತ್ರ್ಯ. ತುಂಬು ತೋಳಿನ ಮಾಸಲು ಬಣ್ಣದ ಅಂಗಿ ತೊಟ್ಟು, ಕೈ ಹಿಂದೆ ಕಟ್ಟಿಕೊಂಡು ಗಂಭೀರವಾಗಿ ನೆಲನೋಡುತ್ತಾ ನಡೆಯುವ ಅವನ ಬದಿಯಲ್ಲೇ ತನ್ನ ಬೂದಿ ಬಣ್ಣದ ದುಪಟ್ಟಾವನ್ನು ಸರಿಪಡಿಸಿಕೊಳ್ಳುತ್ತಾ, ಪಟಪಟನೆ ಏನೋ ವಿವರಿಸುತ್ತಾ ಅವನ ಲಕ್ಷ್ಯ ತನ್ನ ಕಡೆ ಇಲ್ಲವೆನಿಸಿದರೆ ಅವನ ತೋಳು ಹಿಡಿದು ನಿಲ್ಲಿಸಿ, ಪೂರ್ತಿ ಹೇಳಿಯಾದ ಮೇಲೆ ಮುಂದೆ ನಡೆಯಲು ಬಿಡುವ ಅವಳನ್ನು ಕಾಣುವ ನಾನು ಕೆಲವು ಬುದ್ಧಿಜೀವಿಗಳೆನಿಸಿಕೊಂಡವರು. 'ಅವರ ಜೋಡಿ ನಿಜಕ್ಕೂ ಸುಂದರ' ಎಂದುಕೊಂಡಿದ್ದಿದೆ. ಆದರೆ ನಾವೆಲ್ಲ ಅಂದುಕೊಂಡಂತೆ ಅವರಿಬ್ಬರ ಮದುವೆ ಆಗಲಿಲ್ಲ. ಇದೆಲ್ಲ ಬಹಳೇ ವರ್ಷಗಳ ಹಿಂದಿನ ಕತೆ. ನಾವೆಲ್ಲ ಇದ್ದ ಆ ವಿಶ್ವವಿದ್ಯಾಲಯದ ಹಳೇ ಮರಗಳು ಬಿದ್ದಿರಬಹುದು. ಹೊಸ ಮರಗಳು ಹುಟ್ಟಿರಬಹುದು. ನಮ್ಮನೆಯಂಗಳದ ಪಾರಿಜಾತ ವೃಕ್ಷವೂ ಈಗಿಲ್ಲ. ಕಾಲ ನನ್ನನ್ನೂ ಸವೆಸಿದೆ. ಹೆಚ್ಚುತ್ತಿರುವ ನನ್ನ ಜವಾಬ್ದಾರಿಗಳು ಬದುಕಿಗೂ, ರಿಪೇರಿ ಮಾಡಲ್ಪಟ್ಟ ಹೃದಯ ಸಾವಿಗೂ ಕರೆಯುತ್ತಿರುವ ಈ ದಿನಗಳಲ್ಲಿ ಅವರಿಬ್ಬರನ್ನೂ ಬೇರೆ ಬೇರೆ ಸ್ಥಳಗಳಲ್ಲಿ ಭೇಟಿಯಾಗುವ ಪ್ರಸಂಗವೊದಗಿ ಬಂದು ಕೆಲವು ಗಂಟೆ ಅವರೊಂದಿಗೆ ಕಳೆದಾಗ...

**ಅವನು**

'ಹೆಡ್...' ಎಂಬ ರೂಮಿನಿಂದ ಹೊರಬಿದ್ದು, ಕತ್ತಲ ಕಾರಿಡಾರ್ ದಾಟಿ, ಹೊರಬಂದವನಿಗೆ ಮಳೆ ಬೀಳುತ್ತಿರುವುದು ಅರಿವಾಗಿ, ತಂಪು ಹವೆಯನ್ನು ನಿಶ್ಯಬ್ದವಾಗಿ ಒಳಗೆಳೆದುಕೊಳ್ಳುತ್ತಾ ಕಾರನ್ನೇರಿದ. ಒಂದೇ ಕೊಡೆಯೊಳಗೆ ಹೊರಟಿದ್ದ ಜೋಡಿಯೊಂದನ್ನು ಕಂಡು, ಏನೋ ನೆನಪಾದವನಂತೆ ಕಾರನ್ನು ಸ್ಲೋ ಮಾಡಿದವ, ತಟ್ಟನೆ ತಲೆಕೊಡವಿ ಕಾರಿನ ಸ್ಪೀಡು ಹೆಚ್ಚಿಸಿದ. ಅದೇ ಸ್ಪೀಡಿನಲ್ಲಿ ಮನೆ ಮುಟ್ಟಿದವ. 'ಇಷ್ಟು ಸ್ಪೀಡಾಗಿ ಯಾಕೆ ಬಂದೆ, ಯಾರು ಕಾಯುತ್ತಿದ್ದಾರೆ ತನ್ನ?' ಎಂಬ ಪ್ರಶ್ನೆಗೆ ತಾನೇ ನಕ್ಕು, ಗಡ್ಡ ಕೆರೆದುಕೊಳ್ಳುತ್ತಾ, ಅಡಿಗೆಯವ ಬಡಿಸಿದ್ದನ್ನು ಉಂಡು, ಬೆಡ್‌ರೂಮಿಗೆ ಹೋಗಿ ಬಾಗಿಲೆಳೆದುಕೊಂಡ. ತಾನೇ ಫ್ರೇಮ್ ಹಾಕಿಸಿ ಗೋಡೆಗೇರಿಸಿದ ಅಕ್ಕನ ಮೊಮ್ಮಗ, ಅನಿರುದ್ಧನ ಮುಗ್ಧ ನಡುವಿನ ಮುಖದ ಫೋಟೊ ಕಂಡು – ಅವನೊಟ್ಟಿಗೆ ಒಂದಿಷ್ಟು ದಿನ ಬೇಕಾಬಿಟ್ಟಿಯಾಗಿ ಇರಬೇಕೆಂದುಕೊಂಡ. 'ಅನಿ'ಯ ಗುಲಾಬಿ ಎಸಳಿನಂತಹ ಪುಟ್ಟ ಬೆರಳುಗಳು ತನ್ನ ಗಡ್ಡದ ಮೇಲೆ ಹರಿದಾಡಿದಾಗ ಆಗುವ ವಿಚಿತ್ರ ಖುಷಿಗೆ ಪುಳಕಗೊಂಡ. ಡ್ರಾವರ್ ಎಳೆದು ಎರಡು ನಿದ್ರೆಗುಳಿಗೆ ತೆಗೆದು ನುಂಗಿ. ಗಟ್ಟಿಯಾಗಿ ಕಣ್ಮುಚ್ಚುವವ, 'ಅನಿ'ಯೊಂದಿಗೆ ಆಟವಾಡುವ ಕನಸು ಕಾಣುತ್ತಾ.

**ಅವಳು**

ಗಬಗಬನೆ ಆಮ್ಲೇಟು ತಿನ್ನುತ್ತಿರುವ ಮಗನ ಕಡೆ ಪ್ರೀತಿಯಿಂದ ನೋಡಿ, ಎಷ್ಟು ದೊಡ್ಡವನಾಗಿಬಿಟ್ಟಿದ್ದಾನೆ ಎಂದುಕೊಳ್ಳುತ್ತಾ, ಬಾತ್‌ರೂಮಿನಲ್ಲಿರಬಹುದಾದ ಮಗಳಿಗೆ ಬೇಗನೆ ಹೊರಬರಲು ಹೇಳಿ, ಮಧ್ಯಾಹ್ನ ಮನೆಗೆ ಬರುವ ಗಂಡನ ಊಟವನ್ನು ಟೇಬಲ್ ಮೇಲೆ ಸರಿಯಾಗಿಟ್ಟು, ಫೋನ್ ಮಾಡಿ ಗ್ಯಾಸ್ ಸಿಲಿಂಡರ್ ಇನ್ನೂ ಬರಲಿಲ್ಲ ಎಂದು ಗೊಣಗುತ್ತಾ, ಆ ದಿನದ ಲೆಕ್ಚರ್ ಸಲುವಾಗಿ ಹಿಂದಿನ ರಾತ್ರಿಯೇ ತೆಗೆದಿಟ್ಟ ನೋಟ್ಸುಗಳನ್ನು ಎತ್ತಿಕೊಂಡು. 'ಮನೆ ಕಡೆ ಜೋಪಾನ' ಎಂದು ಮಕ್ಕಳಿಗೆ ಹೇಳಿ, ಕಾಲೇಜಿಗೆ ಹೊರಡಲು ಚಪ್ಪಲಿ ಮೆಟ್ಟಿ ಹೊರಬಂದವಳಿಗೆ, ಚಪ್ಪಲಿ ಅಂಗುಷ್ಟ ಹರಿದದ್ದು ನೆನಪಾಗಿ, ಇವತ್ತು ಸಂಜೆಯಾದರೂ ಅದನ್ನು ರಿಪೇರಿ ಮಾಡಿಸಬೇಕೆಂದುಕೊಳ್ಳುವವಳು.

●